ಸಂತೋಷವಾಗುತ್ತದೆ ಎಂಬ ಪ್ರಶ್ನೆ ಇಲ್ಲಿ ಇಲ್ಲ. ಈ ಮೂಲಕ ನೀವೊಬ್ಬ ಒಳ್ಳೆಯ ರಾಜಕಾರಣಿ ಎಂಬುದನ್ನು ರಾಜ್ಯದ ಜನರು ಗುರುತಿಸುತ್ತಾರೆ, ನಿಮ್ಮನ್ನು ಜನರು ಒಪ್ಪಿಕೊಳ್ಳುತ್ತಾರೆ ಎಂಬುದು ನಮ್ಮ ಅಭಿಪ್ರಾಯವಾಗಿದೆ. ಆದುದರಿಂದ ತಾವುಗಳು ಈ ವಿಚಾರದಲ್ಲಿ ರಾಜೀನಾಮೆ ಕೊಡಬೇಕು ಮತ್ತು ಏನು ಈ ಆದೇಶವನ್ನು ಮಾಡಿದ್ದೀರಿ ಅದನ್ನು ಹಿಂತೆಗೆದುಕೊಳ್ಳಬೇಕು. ಅಂತೆಯೇ ಕನಿಷ್ಟ ಪ್ರಾಥಮಿಕ ಸಹಕಾರಿ ಸಂಘಗಳಿಗೆ ನಾಮಕರಣ ಮಾಡುರುದಿಲ್ಲ ಎಂಬ ಮಾತನ್ನು ಹೇಳಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಈ ಸಹಕಾರಿ ಕಾನೂನು 29ರ ಕಲಂ ನಾನು ಮಾಡಿದ್ದಲ್ಲ. ಅದು ನಾನು ಬರುವುದಕ್ಕಿಂತ ಮೊದಲೇ ಇತ್ತು. ಏನೂ ತಿದ್ದುಪಡಿ ಆಗಿಲ್ಲ. ನಾನು ತಿದ್ದುಪಡಿ ಮಾಡಬೇಕೆಂಬ ಅಭಿಲಾಷೆ ಉಳ್ಳವನಾಗಿದ್ದೇನೆ. ಆದರೆ ತಿದ್ದುಪಡಿ ಆಗುವ ತನಕ ಅನಿವಾರ್ಯವಾಗಿ ಸಚಿವ ಸಂಪುಟದವರು ಏನು ಹೇಳುತ್ತಾರೋ ಅದರ ಪ್ರಕಾರವೇ ಮಾಡಬೇಕಾಗುತ್ತದೆ. ತಾವುಗಳು ಏನು ಹೇಳುತ್ತೀರಿ ಅದನ್ನು ಸಚಿವ ಸಂಪುಟದ ಎದುರು ಇಡುತ್ತೇನೆ. ಅವರು ಅದಕ್ಕೆ ಏನು ಹೇಳುತ್ತಾರೋ ಅದನ್ನು ಮಾಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದು ಮಾನ್ಯ ಕೆ.ಹೆಚ್. ಪಾಟೀಲರ ಅಭಿಪ್ರಾಯವಲ್ಲ - ಇದು ಸರಕಾರದವರ ಅಭಿಪ್ರಾಯ. ಈ ಮಾತನ್ನು ನಾವು ಸರ್ವಥಾ ಒಪ್ಪುವುದಿಲ್ಲ. ಇದನ್ನು ಪ್ರತಿ ಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಪಾಟೀಲರು ಮಂತ್ರಿಗಿರಿ ಬಿಡದಿದ್ದರೂ ಈ ಮಂತ್ರಿಗಿರಿ ಬಿಟ್ಟು ಬೇರೆ ಮಂತ್ರಿಗಿರಿ ತೆಗೆದುಕೊಳ್ಳುವುದರಿಂದಾದರೂ ಸಹಕಾರಿ ಆಂದೋಲನಕ್ಕೆ ಒಂದು ಕಿರೀಟ ಇಟ್ಟ ಹಾಗೆ ಆಗುತ್ತದೆ. ನೀವು ಇದನ್ನು ಮುಂದುವರಿಸಿದರೆ ರಾಷ್ಟ್ರೀಯ ಮಟ್ಟದಲ್ಲಿ ನಿಮ್ಮ ಗೌರವ ಹೋಗುತ್ತದೆ. ಆದುದರಿಂದ ನಾವು ಇದನ್ನು ಪ್ರತಿಭಟಿಸುತ್ತೇವೆ.

(ಜನತಾ ದಳದ ಮಾನ್ಯ ಸದಸ್ಯರು ಸಭಾ ತ್ಯಾಗ ಮಾಡುತ್ತೇವೆ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ನಾಮಕರಣದ ವಿಚಾರದಲ್ಲಿ ನಮ್ಮ ವಿರೋಧವಿದ್ದು ಅದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ನಾಮಕರಣದ ವಿಚಾರದಲ್ಲಿ ನಮ್ಮ ವಿರೋಧವಿದ್ದು ಅದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಬಿಜೆಪಿ ಪಕ್ಷದ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸದಸ್ಯರುಗಳು ನಾಮಕರಣದ ಕುರಿತು ಮಾತನಾಡುತ್ತಾ ಇದ್ದರು. ಅವರು ಒಂದು ಪ್ರಾಥಮಿಕ ಹಂತಕ್ಕೆ ನಾಮಕಾರಣಕ್ಕೆ ಹೋಗಿದ್ದಾರೆ. ಈ ಕಡೆಯವರು ಬೇಡ, ಸ್ವಲ್ಪ ಮಟ್ಟಿಗೆ ಮೇಲುಗಡೆ ಮಾಡಿಕೊಳ್ಳಿ, ಪರವಾಗಿಲ್ಲ ಎಂದು ಹೇಳುತ್ತಿದ್ದಾರೆ. ಈ ಇಬ್ಬರನ್ನೂ ವಿರೋಧ ಮಾಡಿ ನಾನು ಕೂಡ ಆಚೆಗೆ ಹೋಗುತ್ತೇನೆ. Because, nominates and democracy are totally antipathetive.

ಆ ಕಾರಣಕ್ಕಾಗಿ ನಾನು ಕೂಡ ಸಭಾತ್ಯಾಗ ಮಾಡುತ್ತೇನೆ.

(ರೈತ ಸಂಘದ ಮಾನ್ಯ ಸದಸ್ಯರಾದ ಪ್ರೊ. ನಂಜುಂಡಸ್ವಾಮಿಯವರು ಸಭಾತ್ಯಾಗ ಮಾಡಿದರು.)

ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸುವ ನಿರ್ಣಯದ ಮೇಲೆ ಚರ್ಚೆ:

ಅಧ್ಯಕ್ಷರು : ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸುವ ನಿರ್ಣಯದ